


ಸಂದರ್ಭದಲ್ಲಿ ಮನೆಕೆಲಸದಲ್ಲಿ ಗಂಡಸರು ನೆರವಾಗಬೇಕಾದರೂ, ಅದು ಅವರ ಸಹಜ ಆಯ್ಕೆಯಾಗಿರುವುದಿಲ್ಲ. ಮಾತ್ರವಲ್ಲ, ಇವು, ದುಡಿದು ಸ್ವಾವಲಂಬಿಗಳಾಗುತ್ತಿರುವ ಮಹಿಳೆಯರ ವಿರುದ್ಧ ಒಳಗಿಂದೊಳಗೇ ಆಕ್ರೋಶವನ್ನು ಹುಟ್ಟಿಸುತ್ತಿವೆ. ಹೊರಗೆ ದುಡಿಯುವ ಮಹಿಳೆ ಮನೆಯೊಳಗಿನ ದುಡಿಮೆಯನ್ನೂ ನಿರ್ವಹಿಸುತ್ತಾ ಎರಡುಪಟ್ಟು ಹೊರೆ ಹೊರಬೇಕಾಗಿದೆ. ಸಾಮಾಜಿಕ, ಕೌಟುಂಬಿಕ ಮೌಲ್ಯಗಳ ನಡುವೆ ಉಂಟಾಗುವ ಸಂಘರ್ಷದಲ್ಲಿ ಮಹಿಳೆ ಪ್ರಧಾನ ಬಲಿಪಶುವಾಗಿರುವ ದುರಂತವೂ ನಮ್ಮ ಮುಂದಿದೆ.

### ಆರ್ಥಿಕೇತರ ದಬ್ಬಾಳಿಕೆ

ಸಾಂಪ್ರದಾಯಿಕತೆ ಮತ್ತು ಬಲಪಂಥೀಯ ಮನೋಭಾವದಲ್ಲಿ ಉಂಟಾಗಿರುವ ಮೇಲುಗೈ ಇಡೀ ಜಗತ್ತಿನಾದ್ಯಂತ ಕಂಡುಬರುವ ವಿದ್ಯಮಾನ. ಬಂಡವಾಳಶಾಹಿ ವ್ಯವಸ್ಥೆ, ತನ್ನ ಲೂಟಿಯಿಂದ ತಲೆದೋರುತ್ತಿರುವ ಆರ್ಥಿಕ ಸಂಕಷ್ಟಗಳನ್ನು ಮರೆಮಾಚಲು ಹಾಗೂ ಜನರನ್ನು ಅಭದ್ರತೆಯ ಭಾವದಲ್ಲಿರಿಸಿ ಸುಲಿಗೆಯನ್ನು ಮುಂದುವರೆಸಲು ಕಂಡುಕೊಂಡಿರುವ ಮಾರ್ಗ ಇದು.

ಭಾರತದಲ್ಲೂ ಇಂತಹ ಸಾಂಪ್ರದಾಯಿಕತೆ ಮತ್ತು ಪ್ರತಿಗಾಮಿತನಗಳು ವ್ಯಾಪಕಗೊಂಡಿವೆ. ಇವು ಪ್ರಜಾತಂತ್ರವನ್ನು ಮತ್ತು ಹಕ್ಕುಗಳನ್ನು ಗೌರವಿಸುವ ಮನಃಸ್ಥಿತಿಗೆ ಯಾವಾಗಲೂ ವಿರುದ್ಧವಾಗಿರುತ್ತವೆ. ಸಂವಿಧಾನ ಮತ್ತು ನೆಲದ ಕಾನೂನಿನ ವಿರುದ್ಧವಾಗಿ ಸಾಂಸ್ಕೃತಿಕ ಯಾಜಮಾನ್ಯ ನಡೆಸುವ ಸಲುವಾಗಿ ರಾಜಕಾರಣ ಮಾಡುವ ಶಕ್ತಿಗಳು, ಮಹಿಳೆಯರನ್ನು (ಅದರಲ್ಲೂ ಶೋಷಿತ ದಮನಿತ ಹಿನ್ನೆಲೆಯ ಮಹಿಳೆಯರನ್ನು), ಎಲ್ಲ ದುರ್ಬಲ ಸಮುದಾಯಗಳನ್ನೂ ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಲು ಪ್ರಯತ್ನಿಸುತ್ತವೆ. ಇದರ ಪರಿಣಾಮವಾಗಿ, ಉದಾರವಾದಿ ಚಿಂತನೆಗಳು ಮತ್ತು ಮಹಿಳಾ ಹೋರಾಟಗಳಿಂದ ದಕ್ಕಿದ ಅನೇಕ ಹಕ್ಕುಗಳು ಮತ್ತು ಸ್ವಾತಂತ್ರ್ಯ ಇಂದು ಅಪಾಯದ ಅಂಚಿನಲ್ಲಿವೆ.

### ಮಹಿಳೆಯ ಬಿಡುಗಡೆಯ ಹಾದಿ

ಜಾಗತೀಕರಣ, ನವ ಉದಾರೀಕರಣದ ಕಾಲಘಟ್ಟವು ಎಲ್ಲ ಬಗೆಯ ಜನಸಮುದಾಯಗಳು, ಚಳವಳಿಗಳು ಮತ್ತು ಚಿಂತನಾಧಾರೆಗಳಲ್ಲಿ ಅನೇಕ ಗೊಂದಲಗಳನ್ನು, ಅಸ್ಪಷ್ಟತೆ ಹಾಗೂ ಅನೈಕ್ಯವನ್ನು ಹುಟ್ಟುಹಾಕಿದೆ. ಮಹಿಳಾ ಸಮುದಾಯವೂ ಇದಕ್ಕೆ ಹೊರತಲ್ಲ.

'ಮಹಿಳೆ' ಎಂಬ ಅಸ್ಮಿತೆಯು ಏಕಶಿಲಾಫಲಕದಂತಹ ರಚನೆಯಲ್ಲ. 'ಮಹಿಳೆ' ಎಂಬ ಗುರುತಿನ ಜೊತೆಗೆ ಜಾತಿ, ಭಾಷೆ, ಊರು, ಧರ್ಮ, ಉದ್ಯೋಗ, ಚಿಂತನೆ, ಸಂಘಟನೆ, ಶಿಕ್ಷಣ – ಇವೇ ಮೊದಲಾದ ಅದೆಷ್ಟೋ ಗುರುತುಗಳು ಏಕಕಾಲದಲ್ಲಿ ಅಸ್ತಿತ್ವದಲ್ಲಿರುತ್ತವೆ. ಹಾಗೆಯೇ, ಕೆಲವೊಮ್ಮೆ ಮಹಿಳೆಯರ ಈ ಭಿನ್ನಬಗೆಯ ಅಸ್ಮಿತೆಗಳು ಒಂದಕ್ಕೊಂದು ವಿರುದ್ಧ ಆಗಿರುವ ಸಾಧ್ಯತೆಗಳೂ ಸಾಕಷ್ಟಿವೆ. ಉದಾಹರಣೆಗೆ: ಕಾರ್ಮಿಕ ಮಹಿಳೆ, ಆಡಳಿತ ಮಂಡಳಿಯ ಮಹಿಳೆ, ಸವಲತ್ತುಗಳಿಂದ ವಂಚಿತ ಅಂಚಿಗೊತ್ತಲ್ಪಟ್ಟ ಮಹಿಳೆ, ಎಲ್ಲ ಬಗೆಯ ಸವಲತ್ತುಗಳುಳ್ಳ ನಗರ ಕೇಂದ್ರಿತ ಮಹಿಳೆ, ಶೋಷಿತ ಸಮುದಾಯದವಳು, ಬಲಾಢ್ಯ ಸಮುದಾಯದವಳು, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವಳು, ಬಹುಸಂಖ್ಯಾತ ಸಮುದಾಯಕ್ಕೆ ಸೇರಿದವಳು... ಇತ್ಯಾದಿ. ಈ ಭಿನ್ನಗುರುತುಗಳೊಂದಿಗೆ ಈ ಕಾಲಘಟ್ಟವು ಹುಟ್ಟಿಸಿರುವ ಸಂಕೀರ್ಣತೆಗಳ ಕಾರಣಕ್ಕೆ ಮಹಿಳಾ ಸಮುದಾಯ ಮತ್ತು ಮಹಿಳಾವಾದಿ ಚಿಂತನೆ–ಚಳವಳಿಗಳ ಮುಂದಿನ ಹಾದಿ ಕ್ಲಿಷ್ಟಗೊಂಡಿದೆ.

### ಅಪಾರ ಸಾಧ್ಯತೆಗಳ ವಿಶಾಲ ಬಯಲು

ಈ ಎರಡು ದಶಕಗಳ ಬೆಳವಣಿಗೆಗಳು ಮಹಿಳಾ ಸಮುದಾಯದ ಮುಂದೆ ಅಪಾರ ಸಾಧ್ಯತೆಗಳ ವಿಶಾಲವಾದ ಬಯಲನ್ನು ತೆರೆದಿರುವುದು ಕೂಡಾ ಸತ್ಯ. ಮೊದಲನೆಯದಾಗಿ, ಉದ್ಯೋಗಕ್ಷೇತ್ರದಲ್ಲಿ ಮಹಿಳೆಯರಿಗೆ ದೊರೆತ ಅವಕಾಶಗಳ ಕಾರಣದಿಂದ, ಎಲ್ಲ ಶೋಷಣೆಗಳಾಚೆಗೂ ಸ್ವಾವಲಂಬನೆ ಮತ್ತು ಸ್ವಾಭಿಮಾನದ ಚಿಂತನೆ ಮೂಡಿದೆ. ತಾಂತ್ರಿಕತೆಯಲ್ಲಿ ಉಂಟಾದ ಪ್ರಗತಿಯಿಂದ ತೆರೆಗೆ ಬಂದ ಹೊಸ ಯಂತ್ರೋಪಕರಣಗಳಿಗೆ ಮಹಿಳೆಯೂ ಆದ್ಯತೆಯ ಗ್ರಾಹಕಿಯಾಗಿದ್ದರಿಂದಾಗಿ ಮಹಿಳೆಯರಿಗೆ ರೊಟೀನ್ ಕೆಲಸಗಳಿಂದ ಒಂದುಮಟ್ಟದ ಬಿಡುಗಡೆ ಸಿಕ್ಕಿದೆ.

ಸಾಮಾಜಿಕ ಜಾಲತಾಣಗಳು, ಮಾಧ್ಯಮಗಳು, ಬರಹ, ರಂಗಭೂಮಿ, ಸಿನಿಮಾ, ಪ್ರಕಟಣೆ ಮೊದಲಾದ ಹೊಸಕಾಲದ ಅಭಿವ್ಯಕ್ತಿಯ ವೇದಿಕೆಗಳಲ್ಲಿ ಮಹಿಳೆಗೆ ಅವಕಾಶಗಳು ಹೆಚ್ಚಿವೆ. ಸಂಘಟಿತರಾಗಲು ಅವಕಾಶಗಳು ಮತ್ತು ಒತ್ತಡ ಎರಡೂ ಹೆಚ್ಚಿವೆ. ಹೆಚ್ಚಿನ ಸಂಖ್ಯೆಯ ದುಡಿಮೆಗಾರ್ತಿಯರಾಗಿ ಮಹಿಳೆಯರು ಸೇರ್ಪಡೆಗೊಂಡಂತೆ ಕಾರ್ಮಿಕ ಸಂಘಟನೆಗಳಲ್ಲೂ ಮಹಿಳೆಯರಿಗೆ ಹೆಚ್ಚಿನ ಮಾನ್ಯತೆ ಸಿಗುತ್ತಿವೆ. ಸಂಘಟನೆಯ ಜವಾಬ್ದಾರಿ ಸ್ಥಾನಗಳಲ್ಲಿ, ನಾಯಕತ್ವದಲ್ಲಿ ಸ್ಥಾನ ದೊರಕುತ್ತಿವೆ. ಇವೆಲ್ಲ ಹೆಣ್ಣುಮಕ್ಕಳ ಮುಂದೆ ಹೊಸಹಾದಿಗಳನ್ನು ತೆರೆದಿಟ್ಟಿವೆ.

ಈ ಸಾಧ್ಯತೆಗಳನ್ನು ಮಹಿಳಾ ಸಮುದಾಯಕ್ಕೆ ಪೂರಕವಾದ ರೀತಿಯಲ್ಲಿ ದುಡಿಸಿಕೊಳ್ಳುವ ಮಾರ್ಗಗಳನ್ನು ಎಷ್ಟು ಬೇಗ ಯೋಜಿಸಲು ಸಾಧ್ಯ ಮತ್ತು ಆ ಯೋಜನೆಗಳನ್ನು ಎಷ್ಟು ಬೇಗ ಸಾಕಾರಗೊಳಿಸಲು ಸಾಧ್ಯ ಎಂಬುದು ಈಗಿರುವ ಪ್ರಶ್ನೆ. ಉದಾಹರಣೆಗೆ, ಚಿಂತನಶೀಲ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದಾಗ್ಯೂ, ಬಹುದೊಡ್ಡ ಸಂಖ್ಯೆಯಲ್ಲಿರುವ ಕಾರ್ಮಿಕ ಮಹಿಳೆಯರು ಮತ್ತು ಅವರ ಚಳವಳಿಯೊಂದಿಗೆ ಈ ಎಲ್ಲ ಮಹಿಳೆಯರಿಗೆ ಪೂರ್ಣಪ್ರಮಾಣದ ಜೀವಂತ ಸಂಬಂಧ ಸಾಧ್ಯವಾಗಿದೆಯಾ? ಇಂತಹ ಹಲವು ಬಗೆಯ ಕೊಂಡಿಗಳನ್ನು ಜೋಡಿಸುವುದು ಮತ್ತು ಸಾಧ್ಯತೆಗಳನ್ನು ಕಾರ್ಯರೂಪಕ್ಕಿಳಿಸಿಕೊಳ್ಳುವುದು ಇಂದಿನ ಮಹಿಳಾ ಚಿಂತನೆಯ ಆದ್ಯತೆಯಾಗಬೇಕು.

ಲೇಖಕಿ ಮಹಿಳಾ ಹೋರಾಟಗಾರ್ತಿ

